# ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ.ಗಳವರ ನ್ಯಾಯಾಲಯ, ನರಗುಂದ

**ಸಿ.ಸಿ ನಂಬರ: 387/2023**

ಉಪಸ್ಥಿತರುಃ ಶ್ರೀಮತಿ ಗಾಯತ್ರಿ. ಹೆಚ್.ಡಿ.,
ಎಂ.ಎ.ಎಂ.ಫಿಲ್., ಎಲ್.ಎಲ್.ಎಂ

ದಿನಾಂಕ 6 ನೇ ಅಕ್ಟೋಬರ್ ಮಾಹೇ 2023

ಫಿರ್ಯಾದಿ : ಕರ್ನಾಟಕ ಸರಕಾರ
ಪರ ಪೊಲೀಸ ಇನ್ಸಪೆಕ್ಟರ,
ನರಗುಂದ ಪಿ. ಎಸ್.

**-ವಿರುದ್ಧ-**

ಆರೋಪಿ : ಶರಣಪ್ಪ ತಂದೆ ಶಿವಪ್ಪ ಗದಗಿನ
ವಯಾಃ 35 ವರ್ಷ, ಉಃ ಶೇತ್ಕಿ
ಸಾಃ ಬೈರನಹಟ್ಟಿ ತಾಃ ನರಗುಂದ ಜಿಃ ಗದಗ.

**ಃ ಆಪಾದನೆ ಃ**

ದಿನಾಂಕಃ 05.01.2023 ಸಾಯಂಕಾಲ 4-30 ಗಂಟೆಯ ಸುಮಾರಿಗೆ ನರಗುಂದ ಪೊಲೀಸ ಠಾಣೆ ವ್ಯಾಪ್ತಿಯ ನರಗುಂದ ಶಹರದ ಅಲಿಬಾಯ್ ಪ್ಲಾಟ್ ಹತ್ತಿರ, ಹುಬ್ಬಳ್ಳಿಬಾಗಲಕೋಟೆಗೆ ರಾಷ್ಟ್ರೀಯ ಹೆದ್ದಾರಿಯಲ್ಲಿ ಆರೋಪಿತನಾದ ನೀನು ಚಲಾಯಿಸುತ್ತಿದ್ದ ಮೋಟಾರ ಸೈಕಲ್ ನಂ.ಕೆಎ-04/ಇ.ಎಲ್-5727 ನೇದ್ದರ ಮೇಲೆ ಚಾಸಾ 7 ನೇದವರಿಗೆ ಕೂಡಿಸಿಕೊಂಡು ನರಗುಂದ ಕಡೆಯಿಂದ ಕೊಣ್ಣೂರ ಕಡೆಗೆ ಅತೀ ವೇಗವಾಗಿ ಮತ್ತು ನಿಷ್ಕಾಲಜಿತನದಿಂದ ಮಾನವೀಯ ಪ್ರಾಣಕ್ಕೆ ಅಪಾಯವಾಗುವಂತೆ ಚಲಾಯಿಸಿಕೊಂಡು ಬಂದು ಕೊಣ್ಣೂರ ಕಡೆಯಿಂದ ನರಗುಂದ ಕಡೆಗೆ ಮರಿಯಪ್ಪ ತಂದೆ ಯಂಕಪ್ಪ ಹೊಸಮನಿ ಇತನು ತನ್ನ ಮೋಟಾರ ಸೈಕಲ ನಂ.ಕೆಎ-29/ಇ.ಜೆ-3190 ನೇದ್ದರ ಹಿಂಬದಿಯಲ್ಲಿ ಚಾಸಾ 1 ರಿಂ 6 ರವರನ್ನು ಕೂಡಿಸಿಕೊಂಡು ಬರುತ್ತಿದ್ದಾಗ ಎದುರುಬದುರಾಗಿ ಮೋಟಾರ ಸೈಕಲಗಗಳಿಂದ ಡಿಕ್ಕಿಪಡಿಸಿ ಅಪಘಾತ ಪಡಿಸಿ ಆ ಮೂಲಕ ನೀನು ಭಾರತ ದಂತ ಸಂಹಿತೆ ಕಲಂ 279 ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧ ಎಸಗಿರುತ್ತಿ ಅಂತಾ ಆಪಾಧಿಸಲಾಗಿದೆ.

ಎರಡನೇಯದಾಗಿ, ಮೇಲ್ಕಾಣಿಸಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿಯಾದ ನೀನು ಈ ಮೇಲೆ ಹೇಳಿದಂತೆ ಅಪಘಾತಪಡಿಸಿದ್ದರಿಂದ ಮರಿಯಪ್ಪ ತಂದೆ ಯಂಕಪ್ಪ ಹೊಸಮನಿ ಇತನ ಮೋಟಾರ ಸೈಕಲ ನಂ.ಕೆಎ-29/ಇ.ಜೆ-3190 ನೇದ್ದರ ಹಿಂದೆ ಕುಳಿತಿದ್ದ ಚಾಸಾ 1 ರಿಂದ 6 ರವರಿಗೆ ಸಾದಾ ಸ್ವರೂಪದ ಗಾಯಪಡಿಸಿ ಆ ಮೂಲಕ ನೀನು ಭಾರತ ದಂಡ ಸಂಹಿತೆ ಕಲಂ 337 ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧ ಎಸಗಿರುತ್ತಿ ಅಂತಾ ಆಪಾದಿಸಲಾಗಿದೆ.

ಮೂರನೆಯದಾಗಿ, ಮೇಲ್ಕಾಣಿಸಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿಯಾದ ನೀನು ಈ ಮೇಲೆ ಹೇಳಿದಂತೆ ಅಪಘಾತಪಡಿಸಿದ್ದರಿಂದ ನಿನ್ನ ಮೋಟಾರ ಸೈಕಲ್ ನಂ.ಕೆಎ-04/ಇ.ಎಲ್-5727 ನೇದ್ದರ ಹಿಂದೆ ಕುಳಿತಿದ್ದ ಚಾಸಾ 7 ರವರಿಗೆ ಗಂಭೀರ ಸ್ವರೂಪದ ಗಾಯಪಡಿಸಿ ಆ ಮೂಲಕ ನೀನು ಭಾರತ ದಂಡ ಸಂಹಿತೆ ಕಲಂ 338 ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧ ಎಸಗಿರುತ್ತಿ ಅಂತಾ ಆಪಾದಿಸಲಾಗಿದೆ.

ನಾಲ್ಕನೇಯದಾಗಿ, ಮೇಲ್ಕಾಣಿಸಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿಯಾದ ನೀನು ಈ ಮೇಲೆ ಹೇಳಿದಂತೆ ಅಪಘಾತಪಡಿಸಿದ್ದರಿಂದ ಮರಿಯಪ್ಪ ತಂದೆ ಯಂಕಪ್ಪ ಹೊಸಮನಿ ಇತನಿಗೆ ಗಂಭೀರ ಗಾಯಗಳಾಗಿ ಸ್ಥಳದಲ್ಲಿಯೇ ಮೃತಪಟ್ಟಿದ್ದು ಆ ಮೂಲಕ ನೀನು ಭಾರತ ದಂಡ ಸಂಹಿತೆ ಕಲಂ 304(ಎ) ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧ ಎಸಗಿರುತ್ತಿ ಅಂತಾ ಆಪಾದಿಸಲಾಗಿದೆ.

ಐದನೆಯದಾಗಿ, ಮೇಲ್ಕಾಣಿಸಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿಯಾದ ನೀನು ಮೋಟಾರ ಸೈಕಲ್ ನಂ.ಕೆಎ-04/ಇ.ಎಲ್-5727 ನೇದ್ದನ್ನು ಚಾಲನೆ ಮಾಡಲು ಅಧೀಕೃತ ಲೈಸನ್ಸ ಹೊಂದದೇ ಈ ಮೇಲೆ ಹೇಳಿದ ರೀತಿಯಲ್ಲಿ ಚಲಾಯಿಸಿ ಅಪಘಾತ ಮಾಡಿ ಆ ಮೂಲಕ ಮೋಟಾರ ವಾಹನ ಕಾಯ್ದೆ ಕಲಂ 3 ರೆ/ವಿ 181 ರ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧ ಎಸಗಿರುತ್ತಿ ಅಂತಾ ಆಪಾದಿಸಲಾಗಿದೆ.

ಆರನೇಯದಾಗಿ, ಮೇಲ್ಕಾಣಿಸಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿಯಾದ ನೀನು ನಿನ್ನ ಮೋಟಾರ ಸೈಕಲ್ ನಂ.ಕೆಎ-04/ಇ.ಎಲ್-5727 ನೇದ್ದರ ವಿಮೆ ಪಾಲಿಸಿ ಚಾಲನೆಯಲ್ಲಿಡದೆ ಚಲಾಯಿಸಿ ಅಪಘಾತಪಡಿಸಿ ಆ ಮೂಲಕ  ಮೋಟಾರ ವಾಹನ ಕಾಯ್ದೆ ಕಲಂ 196 ರ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧ ಎಸಗಿರುತ್ತಿ ಅಂತಾ ಆಪಾದಿಸಲಾಗಿದೆ.

ಕೊನೆಯದಾಗಿ, ಮೇಲೆ ಹೇಳಿದ ಸಮಯ ಮತ್ತು ದಿನಾಂಕದಂದು ಆರೋಪಿತನಾದ ನೀನು ನಿನ್ನ ನಿನ್ನ ಮೋಟಾರ ಸೈಕಲ್ ನಂ.ಕೆಎ-04/ಇ.ಎಲ್-5727 ನೇದ್ದನ್ನು  ಮದ್ಯಪಾನ ಮಾಡಿ ವಾಹನ ಚಾಲನೆ ಮಾಡುತ್ತಿದ್ದಾಗ ಸಿಕ್ಕು ಆ ಮೂಲಕ  ಕಲಂ 185 ಮೋಟಾರ ವಾಹನ ಕಾಯ್ದೆ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧ ಎಸಗಿರುತ್ತಿ ಅಂತಾ ಆಪಾಧಿಸಲಾಗಿದೆ.

## ಆರೋಪಿ ಹೇಳಿಕೆ

ಪ್ರಶ್ನೆ : ಈಗ ನಿನಗೆ ಓದಿ ಹೇಳಿದ ಆಪಾದನೆಯ ಸಾರಾಂಶ ತಿಳಿದಿದೆಯೆ?
ಉತ್ತರ : Yes

ಪ್ರಶ್ನೆ : ನೀನು ಆಪಾಧನೆಯನ್ನು ಒಪ್ಪಿಕೊಳ್ಳುತಿಯೋ ಅಥವಾ ವಿಚಾರಣೆ ಆಗಲು ಬಯಸುತ್ತಿಯೊ?
ಉತ್ತರ : I plead not guilty and have defence to make.

(ಆರೋಪಿಗೆ  ಓದಿ ತಿಳಿಸಿ ಹೇಳಲಾಗಿ, ಆರೋಪಿ ಕೊಟ್ಟ ಉತ್ತರವನ್ನು ಬರೆಯಲಾಯಿತು)

ದಿನಾಂಕ: 06.10.2023

ಪ್ರ. ದ. ನ್ಯಾ. ದಂಡಾಧಿಕಾರಿಗಳು,
ನರಗುಂದ

ಆರೋಪಿ ಸಹಿ :